20. ಗಿರಿಜನ ಉಪ ಯೋಜನೆ

21. ರೈತರಿಗೆ ತರಬೇತಿ

22. ಯೋಜನೇತರ ಕಾರ್ಯಕ್ರಮಗಳು ಮತ್ತು ಬರ ಪರಿಹಾರ

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಭಿವೃದ್ಧಿಪಡಿಸಿರುವ ತೋಟಗಾರಿಕೆ ಬೆಳೆಗಳೆಂದರೆ: ಮಾವು, ಸಪೋಟ, ಗೇರು, ಬಾಳೆ, ತೆಂಗು, ಕಾಳುಮೆಣಸು, ವೆನಿಲ್ಲಾ, ನೆಲ್ಲಿ ಔಷಧೀಯ ಮತ್ತು ಸುಗಂಧಿತ ಬೆಳೆಗಳು. ವಾಣಿಜ್ಯ ಪುಷ್ಪ ಬೆಳೆಗಳಾದ ಗುಲಾಬಿ, ಅಂಥೂರಿಯಂ, ಆರ್ಕಿಡ್ಸ್, ಉಡುಪಿ ಮಲ್ಲಿಗೆ ಮತ್ತು ಗ್ಲಾಡಿಯೋಸ, ತರಕಾರಿ ಬೆಳೆಗಳಾದ ಬೆಂಡೆಕಾಯಿ, ಬದನೆ, ಸಿಹಿ ಗೆಣಸು, ಮರ ಗೆಣಸು, ಕುಂಬಳ ಜಾತಿ ತರಕಾರಿಗಳು, ಇತ್ಯಾದಿ ತೋಟಗಾರಿಕೆ ಬೆಳೆಗಳನ್ನು ಅಂದಾಜು 1.46 ಲಕ್ಷ ಹೆ.ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಾಗಿದೆ.

ಇ) ತೋಟಗಾರಿಕೆ ಬೆಳೆಗಳ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾಗಿರುವ ಪ್ರಮುಖವಾದ ಕಾರ್ಯಕ್ರಮಗಳೆಂದರೆ;

(1) ವಿವಿಧ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮ

(2) ಉತ್ಕೃಷ್ಟ ಗುಣಮಟ್ಟದ ಸಸಿ/ಕಸಿಗಳ ಉತ್ಪಾದನೆ ಮತ್ತು ವಿತರಣೆ

(3) ತರಬೇತಿ ಮತ್ತು ವಿಚಾರಸಂಕಿರಣಗಳ ಮೂಲಕ ಆಧುನಿಕ ತೋಟಗಾರಿಕೆ ಬೇಸಾಯದ ಬಗ್ಗೆ ತಾಂತ್ರಿಕ ಮಾಹಿತಿ ಒದಗಿಸುವುದು.

(4) ನಬಾರ್ಡ್ ಮತ್ತು ರಾಷ್ಟ್ರೀಯ ತೋಟಗಾರಿಕೆ ಮಂಡಳಿವತಿಯಿಂದ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಸಾಲ-ಸೌಲಭ್ಯ ಕಲ್ಪಿಸುವುದು.

(5) ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿ ಅಳವಡಿಸಲು ಉತ್ತೇಜನ

(6) ಕೃಷಿ ರಫ್ತು ವಲಯಗಳ ಸ್ಥಾಪನೆ

(7) ತೋಟಗಾರಿಕೆ ಉತ್ಪನ್ನಗಳ ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ಶೇಖರಣೆ ತರಬೇತಿ ಏರ್ಪಡಿಸುವುದು ಮತ್ತು ಮಾಹಿತಿ ಒದಗಿಸುವುದು.

ಈ) ಅಂತಹ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

1469(1773) ಶ್ರೀ ಪಾಟೀಲ ಡಿ.ಆರ್(ಗದಗ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತರ ಹಣಕಾಸಿನ ವ್ಯವಸ್ಥೆ ಮಾಡಲು ಪ್ರಾರಂಭಗೊಂಡ ಸಹಕಾರ ಚಳುವಳಿ ನೂರು ವರ್ಷ ಕಳೆದರೂ ಇನ್ನು ಅರ್ಧದಷ್ಟು ರೈತರಿಗೂ ಸಹ ಈ ವ್ಯವಸ್ಥೆ ಮಾಡುವಲ್ಲಿ ವಿಫಲವಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯ?

ಆ) ಸರ್ಕಾರ ಕಾಲ ಕಾಲಕ್ಕೆ ಕೊಡಮಾಡವ ಸೌಲಭ್ಯ ಸಮಾಜದ ಕೆಲವೇ ರೈತರಿಗೆ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಹು ಸಂಖ್ಯಾತ ರೈತರಿಗೆ ಆಗುತ್ತಿರುವ ಈ ತಾರತಮ್ಯವನ್ನು ನಿಲ್ಲಿಸುವುದಕ್ಕೋಸ್ಕರ ಸರ್ಕಾರ ಪಂಚ್ಯತ್ ರಾಜ್ಯ ವ್ಯವಸ್ಥೆಯಲ್ಲಿ ತಂದಿರುವ ಮೀಸಲಾತಿ ಜಾರಿಗೊಳಿಸಿ ಸರ್ಕಾರದ ಸೌಲಭ್ಯಗಳನ್ನು ಬಹುಜನ ರೈತರಿಗೆ ಮುಟ್ಟಿಸುವ ಕ್ರಮ ಕೈಗೊಳ್ಳುವುದೇ?

ಈ) ಈ ಕ್ರಾಂತಿಕಾರಕ ಕ್ರಮವನ್ನು ಸಹಕಾರಿ ಶತಮಾನೋತ್ಸವವನ್ನುಆಚರಿಸುವ ಈ ಸಂದರ್ಭದಲ್ಲಿ ಜಾರಿಗೆ ಬರುವಂತೆ ಕಾನೂನು ಬದಲಾವಣೆಯನ್ನು ಕೂಡಲೇ ತರಲಾಗುವುದೇ?

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು):

ಅ) ರಾಜ್ಯದಲ್ಲಿನ ಸಹಕಾರ ಸಂಸ್ಥೆಗಳು ಸುಮಾರು ಶೇ.40ರಷ್ಟು ರೈತರ ಪತ್ತಿನ ಅಗತ್ಯಗಳನ್ನು ಪೂರೈಸುತ್ತಿವೆ.

ಆ) ಹೌದು.

ಇ) ಮತ್ತು ಈ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಪ್ರಕಾರ ಪ್ರತಿ ಪ್ರಾಥಮಿಕ ಸಹಕಾರ ಸಂಘದ ಆಡಳಿತ ಸಮಿತಿಯಲ್ಲಿ ಒಂದು ಸ್ಥಾನವನ್ನು ಮಹಿಳೆಯರಿಗೂ ಮತ್ತೊಂದು ಸ್ಥಾನವನ್ನು ಪರಿಶಿಷ್ಟ ಜಾತಿ/ವರ್ಗದವರಿಗೂ ಮೀಸಲಿರಿಸಲಾಗಿದೆ. ಅಲ್ಲದೆ ಸರ್ಕಾರದ ನಾಮನಿರ್ದೇಶನ ಮಾಡುವಾಗ ಒಂದು ಸ್ಥಾನವನ್ನು ಮಹಿಳೆಯರಿಗೂ ಮತ್ತೊಂದು ಸ್ಥಾನವನ್ನು ಪರಿಶಿಷ್ಟ ಜಾತಿ/ವರ್ಗದವರಿಗೂ ಮೀಸಲಿಡುವುದು ಕಡ್ಡಾಯವಾಗಿರುತ್ತದೆ.

ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿರುವಂತೆ ಸಹಕಾರ ಸಂಸ್ಥೆಗಳಲ್ಲಿ ಮೀಸಲಾತಿ ಮಾಡಬೇಕಾಗಿದ್ದರೆ ಸಹಕಾರಿ ಸಂಸ್ಥೆಗಳನ್ನು ಭಾರತದ ಸಂವಿಧಾನದ ಪರಿಚ್ಛೇದ 12ರಡಿ ತರಬೇಕಾಗುತ್ತದೆ.

1470(1774) ಶ್ರೀ ಪಾಟೀಲ್ ಡಿ.ಆರ್.(ಗದಗ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಹಕಾರ ವಿಷಯ ಸಮಿತಿಗಳ ಶಿಫಾರಸ್ಸಿನ ಪ್ರಕಾಶ ಮಾಲುಗಳ ಮಾರಾಟವಾದ ಕೂಡಲೇ ರೈತರಿಗೆ ಕೊಡಬೇಕಾಗುವ ಹಣವನ್ನು ತಕ್ಷಣ ಕೊಡುವ ಸಂಬಂಧದಲ್ಲಿ ರೂಪಿತವಾಗಿರುವ ಕಾನೂನನ್ನು 6 ವರ್ಷಗಳು ಕಳೆದರೂ ಅನುಷ್ಠಾನಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ರೀತಿ ನಿರ್ಲಕ್ಷ ಮಾಡಿ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಮುಂದುವರೆಸುವುದು ಈ ಸರ್ಕಾರದ ನಿಲುವೆ;

ಇ) ಈ ಕಾನೂನನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ ಎಲ್ಲಾ ಕ್ರಮಗಳನ್ನು ಇದೇ ಸಾಲಿನ ನವೆಂಬರ್ 1 ರೊಳಗಾಗಿ ಕೈಗೊಂಡು ಈ ಅನ್ಯಾಯ ತಡೆಗಟ್ಟಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಪ್ರಕಾಶ್.ಭಾ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಬಂದಿದೆ.

ಆ) ಮತ್ತು ಇ) ಇಲ್ಲ ಈ ವಿಷಯವು ತೀವ್ರ ಪರಿಶೀಲನೆಯಲ್ಲಿದ್ದು, ಕಾನೂನನ್ನು ಅನುಷ್ಠಾನಗೊಳಿಸುವಲ್ಲಿರುವ ತೊಡಕುಗಳನ್ನು ನಿವಾರಿಸುವ ಮೂಲಕ ಅತೀ ಶೀಘ್ರದಲ್ಲಿ ಉಪಬಂಧಗಳನ್ನು ಜಾರಿಗೊಳಿಸುವ ಬಗ್ಗೆ ಕ್ರಮ ವಿಧಾನವನ್ನು ರೂಪಿಸಲಾಗುತ್ತಿದೆ.

1471(1775) ಶ್ರೀ ಪಾಟೀಲ್ ಡಿ.ಆರ್.(ಗದಗ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಸಾಗುವಳಿ ಜಮೀನೆಷ್ಟು ಇದರಲ್ಲಿ ಸಣ್ಣ ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳಿಂದ ನೀರು ಪಡೆಯುತ್ತಿರುವ ಜಮೀನು ಎಷ್ಟು;

ಆ) ಇದು ಒಟ್ಟು ಸಾಗುವಳಿ ಜಮೀನಿನ ಪ್ರತಿಶತ ಪ್ರಮಾಣವೆಷ್ಟಾಗಿದೆ;